ಗಂಗಾ ಗ್ರಂಥಾಲಯ

# ಭೋಜನಕೂಟದ ಭಾಷಣ

ನೊಬೆಲ್ ಔತಣಕೂಟದಲ್ಲಿ ಸೇಲ್ಮಾ ಲ್ಯಾಂಗೆರ್ಲಾಫ್ ಅವರ ಭಾಷಣ

ಗ್ರಾಂಡ್ ಹೊಟೇಲ್, ಸ್ಟಾಕ್ ಹೋಂ, ಡಿಸೆಂಬರ್ ೧೦, ೧೯೦೯.

ಅನುವಾದ: ಸಿಡ್ನಿ ಶ್ರೀನಿವಾಸ್



ನೊಬೆಲ್ ಬಹುಮಾನ ಪಡೆದ ಉಡುಪಿನಲ್ಲಿ ಲ್ಯಾಗರ್ಲಾಫ್

ಕೆಲವು ದಿನಗಳ ಹಿಂದೆ ನಾನು ಸ್ಟಾಕ್ ಹೋಮಿಗೆ ಬರುತ್ತಿದ್ದ ಟ್ರೈನಿನಲ್ಲಿ ಕುಳಿತಿದ್ದೆ. ಸಂಜೆಯ ವೇಳೆ. ನನ್ನ ಬೋಗಿಯಲ್ಲಿ ಬೆಳಕು ತೀರಾ ಕಡಿಮೆ ಇದ್ದು, ಹೊರಗಂತೂ ಅದು ಇರಲೇ ಇಲ್ಲ. ನನ್ನ ಸಹಪ್ರಯಾಣಿಕರು ತಂತಮ್ಮ ಸ್ಥಳಗಳಲ್ಲಿ ತೂಕಡಿಸುತ್ತಿದ್ದರು. ನಾನು ಸುಮ್ಮನೆ ಟ್ರೈನಿನ ಶಬ್ದವನ್ನು ಕೇಳುತ್ತಾ ಕುಳಿತಿದ್ದೆ.

ಹಿಂದೆ ನಾನು ಸ್ಟಾಕ್ ಹೋಮಿಗೆ ಬಂದ ದಿನಗಳ ಬಗ್ಗೆ ಯೋಚಿಸಲಾರಂಭಿಸಿದೆ. ಕಷ್ಟ ಎನಿಸಿದ ಕೆಲಸಕ್ಕಾಗಿಯೇ ಬರುತ್ತಿದ್ದೆ - ಯಾವುದೋ ಪರೀಕ್ಷೆಯಲ್ಲಿ ಬರೆಯಲು ಅಥವಾ ನನ್ನ ಹಸ್ತಪ್ರತಿಗೆ ಪ್ರಕಾಶಕರನ್ನು ಅರಸಿ. ಈಗ ನಾನು ಸಾಹಿತ್ಯದ ನೊಬೆಲ್ ಬಹುಮಾನ ಸ್ವೀಕರಿಸಲು ಬಂದೆ, ಅದೂ ಕಷ್ಟ ಸಾಧ್ಯವೇ ಎಂದು ಭಾವಿಸಿದ್ದೆ.


ಈ ಶರದ್ಕಾಲ ನಾನು ವಾರ್ಮ್ ಲ್ಯಾಂಡಿನಲ್ಲಿರುವ (Värmland) ನನ್ನ ಮನೆಯಲ್ಲಿ ಏಕಾಂಗಿಯಾಗಿ ಕಳೆದೆ. ಆದರೆ ಈಗ ಇಲ್ಲಿ ಬಂದು ಇಷ್ಟು ಜನರ ಮುಂದೆ ನಿಲ್ಲಬೇಕಾಗಿದೆ. ಏಕಾಂತ ಧಾಮದಲ್ಲಿ ಜೀವನದ ಗಲಿಬಿಲಿಗೆ ನಾಚಿ ದೂರವಿದ್ದ ನಾನು ಪ್ರಪಂಚವನ್ನು ಎದುರಿಸುವುದು ಹೇಗೆ ಎಂದು ಹೆದರಿ ಕುಳಿತಿದ್ದೆ.

ನನ್ನೊಳಗೆ ಎಲ್ಲೋ ಈ ಬಹುಮಾನ ದೊರೆತಿದ್ದಕ್ಕೆ ಸಂತೋಷ ಉಂಟಾಯಿತು. ನನ್ನ ಅದೃಷ್ಟವನ್ನು ಕೊಂಡಾಡುವವರ ಬಗ್ಗೆ ಆಲೋಚಿಸಿ ನನ್ನ ತವಕವನ್ನು ಕಡಿಮೆ ಮಾಡಿಕೊಂಡೆ. ನನ್ನ ಸ್ನೇಹಿತರು, ಸಹೋದರ ಸಹೋದರಿಯರು, ಎಲ್ಲದಕ್ಕಿಂತ ಹೆಚ್ಚಾಗಿ ಇಂದಿನ ವರೆಗೆ ಮನೆಯಲ್ಲಿ ಕುಳಿತು ಇದನ್ನೆಲ್ಲಾ ನೋಡಲು ಬದುಕಿರುವ ನನ್ನ ತಾಯಿ.

ನನ್ನ ತಂದೆಯ ಬಗ್ಗೆ ಯೋಚಿಸಿದೆ. ಅವನು ಇಂದು ಬದುಕಿಲ್ಲ, ನಾನು ಅವನ ಬಳಿ ಹೋಗಿ "ನನಗೆ ನೊಬೆಲ್ ಬಹುಮಾನ ಬಂದಿದೆ ನೋಡು" ಎನ್ನುವಂತಿಲ್ಲ; ಇದಕ್ಕಾಗಿ ವ್ಯಥೆ ಪಡುತ್ತೇನೆ. ಈ ಸುದ್ದಿಯನ್ನು ಕೇಳಿ ಅವನಿಗಿಂತ ಆನಂದ ಪಡುತ್ತಿದ್ದವರು ಮತ್ತೊಬ್ಬರಿಲ್ಲ, ಎಂದು ನನಗೆ ಗೊತ್ತು. ಬರೆಯಲಾದ ಪದಗಳು ಮತ್ತು ಅವುಗಳ ನಿರ್ಮಾತೃಗಳ ಬಗ್ಗೆ ಆತನಷ್ಟು ಪ್ರೇಮ ಮತ್ತು ಗೌರವ ಇಟ್ಟಿದ್ದ ಮತ್ತೊಬ್ಬ ವ್ಯಕ್ತಿಯನ್ನು ನಾನರಿಯೆ. ಸ್ವೀಡಿಷ್ ಪರಿಷ್ಠಾನ ನನಗೆ ಈ ಉನ್ನತ ಪ್ರಶಸ್ತಿಯನ್ನು

ಕೊಟ್ಟಿದೆ ಎಂಬುದು ಅವನಿಗೆ ತಿಳಿಸುವಂತಿದ್ದರೆ ಎಷ್ಟು ಚೆನ್ನಾಗಿತ್ತು ಎನಿಸುತ್ತದೆ. ಹೌದು, ಅವನಿಗೆ ನಾನು ಈ ಸುದ್ದಿಯನ್ನು ಹೇಳಲಾಗದಿರುವುದು ವಿಷಾದವೇ ಸರಿ.

ರಾತ್ರಿ ಟ್ರೈನಿನಲ್ಲಿ ಪ್ರಯಾಣ ಮಾಡುವವರಿಗೆ ಆಗುವ ಸಾಮಾನ್ಯ ಅನುಭವ ಇದು. ಕೆಲ ಸಮಯ ಟ್ರೈನು ಸರಾಗವಾಗಿ ಕಂಬಿಯ ಮೇಲೆ ಚಲಿಸುತ್ತದೆ. ಚಕ್ರ ಮತ್ತು ಕಂಬಿಗಳ ತಿಕ್ಕಾಟ ಕೇಳಿಬರುವುದಿಲ್ಲ. ಆಗ ಚಕ್ರಗಳಿಂದ ಹೊರಡುವ ಶಬ್ದ ಶಾಂತ ಜೋಗುಳದಂತೆ ಕೇಳಿಬರುತ್ತದೆ. ಬೋಗಿಗಳು ಕಂಬಿಗಳ ಮೇಲೆ ಚಲಿಸುತ್ತಿವೆ ಎನಿಸುವುದಿಲ್ಲ, ಬದಲಾಗಿ ಅವು ಗಾಳಿಯಲ್ಲಿ ತೇಲುತ್ತಿರುವಂತೆ ಭಾಸವಾಗುತ್ತದೆ. ನಾನು ಟ್ರೈನಿನಲ್ಲಿ ಕುಳಿತು ಮತ್ತೆ ನನ್ನ ತಂದೆಯನ್ನು ನೋಡುವಂತಿದ್ದರೆ ಎಂದು ಭಾವಿಸುತ್ತಿದ್ದಾಗ ನನಗೆ ಆದ ಅನುಭವ ಅದೇ. ಟ್ರೈನಿನ ಚಲನೆ ತೀರಾ ಹಗುರ ಮತ್ತು ನಿಶ್ಶಬ್ದ ಎನಿಸಿತು. ನಾನು ಈ  ಭೂಮಿಯ ಮೇಲೆ ಇಲ್ಲವೇನೋ ಎನಿಸಿತು ನನಗೆ. ನನ್ನ ಹಗಲುಗನಸು ಪ್ರಾರಂಭವಾಯಿತು. “ನಾನು ಸ್ವರ್ಗಕ್ಕೆ ಹೋಗಿ ನನ್ನ ತಂದೆಯನ್ನು ಭೇಟಿಮಾಡುತ್ತೇನೆ ಎಂದು ಏಕೆ ಭಾವಿಸಬಾರದು? ಬೇರೆಯವರಿಗೆ ಈ ತರಹದ ಅನುಭವವಾಗಿದೆ ಎಂದು ಕೇಳಿದ್ದೇನೆ. . ನಾನೇ ಏಕೆ ಹಾಗೆ ಮಾಡಬಾರದು?” ಟ್ರೈನ್ ತನ್ನ ಪಾಡಿಗೆ ತಾನು ಜಾರುತ್ತಾ ಹೋಗುತ್ತಿತ್ತು. ಅದಕ್ಕೆ ಹೋಗಲು ಇನ್ನೂ ಬಹಳ ದೂರವಿತ್ತು. ಆದರೆ ನನ್ನ ಯೋಚನೆಗಳು ಅದರ ವೇಗವನ್ನು ಮೀರಿ ಚಲಿಸುತ್ತಿದ್ದವು. ತಂದೆ ಖಂಡಿತವಾಗಿ ವರಾಂಡಾದಲ್ಲಿ ತೂಗು ಕುರ್ಚಿಯ ಮೇಲೆ ಕುಳಿತಿರುತ್ತಾನೆ. ಅವನ ಮುಂದಿರುವ ಉದ್ಯಾನದಲ್ಲಿ  ಸೂರ್ಯನ ಬೆಳಕು, ಹೂವುಗಳು ಮತ್ತು ಹಕ್ಕಿಗಳು. ಅವನು ಫ್ರಿಟ್ಯೋಸ್ ಸಾಗಾ (Fritjofs saga) ಪುಸ್ತಕವನ್ನು ಓದುತ್ತಿರುತ್ತಾನೆ. ಖಂಡಿತವಾಗಿ ನನ್ನನ್ನು ನೋಡಿದ ಕೂಡಲೇ ಪುಸ್ತಕವನ್ನು ಪಕ್ಕಕ್ಕೆ ಇರಿಸಿ, ತನ್ನ ಕನ್ನಡಕವನ್ನು ಹಣೆಯ ಮೇಲಕ್ಕೆ ತಳ್ಳಿ, ಎದ್ದು ನನ್ನತ್ತ ಧಾವಿಸುತ್ತಾನೆ. “ಮಗಳೇ, ನಿನ್ನನ್ನು ನೋಡಿ ಸಂತೋಷವಾಯಿತು.” ಅಥವಾ “ನೀನು ಇಲ್ಲಿಗೇಕೆ ಬಂದೆ? ಹೇಗಿದ್ದೀಯಾ?” ಎಂದು ಕೇಳುತ್ತಾನೆ, ಸದಾ ಅವನು ಕೇಳುತ್ತಿದ್ದಂತೆ.



ಮಾರ್ಬಾಕಾದಲ್ಲಿನ ತಮ್ಮ ಮನೆಯಲ್ಲಿನ ಕೊಟಡಿಯಲ್ಲಿ ಲ್ಯಾಗರ್ಲಾಫ್

ಮತ್ತೆ ಅವನು ತೂಗುಕುರ್ಚಿಗೆ ಹಿಂದಿರುಗಿ ಕನ್ನಡಕವನ್ನು ಸರಿಮಾಡಿಕೊಳ್ಳುತ್ತಾನೆ.ನಂತರವೇ ನಾನು ಏತಕ್ಕಾಗಿ ಅವನೆಡೆ ಬಂದಿರಬಹುದು ಎಂದು ಯೋಚಿಸಲಾರಂಭಿಸುತ್ತಾನೆ. ತಕ್ಷಣ ತಿರುಗಿ ಕೇಳುತ್ತಾನೆ - “ಏನೂ ತೊಂದರೆ ಇಲ್ಲತಾನೇ? ಖಂಡಿತಾನಾ?” ನಾನು ಉತ್ತರ ನೀಡುತ್ತೇನೆ - “ಏನೂ ಇಲ್ಲ ಅಪ್ಪ, ಎಲ್ಲಾ ಸರಿಯಾಗಿದೆ.” ನಾನು ಸಿಹಿಸುದ್ದಿ ಹೇಳುವುದನ್ನು

ಬೇಕೆಂದೇ ನಿಧಾನಿಸುತ್ತೇನೆ. ಪರೋಕ್ಷವಾಗಿ ಹೇಳಲೆತ್ನಿಸುತ್ತೇನೆ. "ನಿನ್ನ ಬುದ್ಧಿವಾದ ಕೇಳಲು ಬಂದೆ, ಅಪ್ಪ, ನಾನು ವಿಪರೀತ ಸಾಲದಲ್ಲಿ ಮುಳುಗಿ ಹೋಗಿದ್ದೇನೆ."

" ಇಲ್ಲ ಮಗಳೇ, ಈ ವಿಚಾರದಲ್ಲಿ ನಾನು ಯಾವ ಸಹಾಯವನ್ನೂ ಮಾಡಲಾರೆ. ಈ ಸ್ಥಳದಲ್ಲಿ, ವಾರ್ಮ್ ಲ್ಯಾಂಡಿನ ಹಳೆಮನೆಗಳಲ್ಲಿರುವಂತೆ, ಹಣವೊಂದನ್ನು ಬಿಟ್ಟು ಮತ್ತೆಲ್ಲವೂ ಇವೆ."

"ಹಾಗಲ್ಲ ಅಪ್ಪಾ, ನಾನು ಯಾರಿಗೂ ಹಣ ಕೊಡಬೇಕಾಗಿಲ್ಲ." "ಹಾಗಾದರೆ ಅದು ಇನ್ನೂ ಗಂಭೀರವಾದ ವಿಷಯ". ಆಗ ತಂದೆ ಹೇಳುತ್ತಾನೆ "ಮೊದಲಿನಿಂದ ಪ್ರಾರಂಭಿಸು ಮಗಳೇ."

"ನನಗೆ ಸಹಾಯ ಮಾಡು ಎಂದು ಕೇಳುವುದು ದೊಡ್ಡದೇನಲ್ಲ, ಅಪ್ಪಾ. ಏಕೆಂದರೆ ಮೊದಲಿನಿಂದಲೂ ನೀನು ಮಾಡಿದ ತಪ್ಪು (ಇವೆಲ್ಲಕ್ಕೂ ಕಾರಣ). ನೀನು ಮಕ್ಕಳ ಮುಂದೆ ಪಿಯಾನೋ ನುಡಿಸುತ್ತಾ ಬೆಲ್ ಮನ್ನನ (Bellman's) ರಚನೆಗಳನ್ನು ಹಾಡುತಿದ್ದದ್ದು ನೆನಪಿದೆಯೇ? ಮತ್ತು ಚಳಿಗಾಲದಲ್ಲಿ ಎರಡು ಬಾರಿಯಾದರೂ ನಾವು ಟೆಗ್ನರ್ ಮತ್ತು ರನ್ ಬರ್ಗ್ ಮತ್ತು ಅಂಡೆರ್ಸನ್ (Tegnér and Runeberg and Andersen) ಅವರ ಕೃತಿಗಳನ್ನು ಓದುವಂತೆ ಮಾಡಿದೆ. ಆಗಿನಿಂದ ನಾನು ಸಾಲ ಪಡೆಯುವುದು ಪ್ರಾರಂಭವಾಯಿತು. ಅಪ್ಪಾ, ಮಕ್ಕಳ ಕತೆಗಳನ್ನು ಮತ್ತು ವೀರಾಧಿವೀರರ ಶೌರ್ಯವನ್ನು, ಮತ್ತು ನನ್ನ ದೇಶದ ಬಗ್ಗೆ ತಿಳಿಸಿಕೊಟ್ಟು, ನನಗೆ ಮಾನವ ಜೀವನದ ಘನತೆ ಮತ್ತು ಹೇಯತನಗಳ ದರ್ಶನ ಮಾಡಿಸಿದ ಅವರ ಋಣವನ್ನು ನಾನು ಹೇಗೆ ತೀರಿಸಲಿ? "

ಅಪ್ಪ ತೂಗುಕುರ್ಚಿಯ ಮೇಲೆ ಸರಿಯಾಗಿ ಕೂರುತ್ತಾನೆ; ಅವನ ಕಣ್ಣುಗಳಲ್ಲಿ ಸೋಜಿಗದ ದೃಷ್ಟಿ ಮೂಡುತ್ತದೆ. "ನಿನ್ನನ್ನು ನಾನು ಇಂತಹ ಋಣಬಂಧಳನ್ನಾಗಿ ಮಾಡಿದ್ದೇನೆಂದು ನನಗೆ ಸಂತೋಷವಾಗುತ್ತಿದೆ. " ಎಂದು ಹೇಳುತ್ತಾನೆ. "ನೀನು ಹೇಳುತ್ತಿರುವುದು ಸರಿ ಇರಬಹುದು, ಅಪ್ಪಾ, ಆದರೆ ಅಷ್ಟೇ ಅಲ್ಲ, ಇನ್ನೂ ಇದೆ. ನನಗೆ ಸಾಲ ನೀಡಿರುವವರ ಸಂಖ್ಯೆ ಎಷ್ಟಿರಬಹುದು ಊಹಿಸು. ವಾರ್ಮ್ ಲ್ಯಾಂಡಿನಲ್ಲಿ ನೀನು ಯುವಕನಾಗಿ ವಾಸಿಸುತ್ತಿದ್ದಾಗ ಅಲ್ಲಿ ಕಂಡುಬಂದ ನಿರ್ಗತಿಕರು, ಅಲೆಮಾರಿಗಳನ್ನು, ಅವರು ಮಾಡುತ್ತಿದ್ದ ಚೇಷ್ಟೆ, ಹಾಡುತ್ತಿದ್ದ ಹಾಡುಗಳನ್ನು ಮರೆಯುವಂತಿದೆಯೇ? ನಾನು ಅವರಿಗೂ ಋಣಿಯಲ್ಲವೇ? ಇನ್ನು ಕಾಡಿನಿಂದ ಹೊರಬಂದಂತೆ ಅಲ್ಲಿದ್ದ ಕುಟೀರಗಳಲ್ಲಿ ಕುಳಿತಿರುತ್ತಿದ್ದ ವಯಸ್ಕ ಗಂಡಸರು ಮತ್ತು ಹೆಂಗಸರು ನನಗೆ ಹೇಳುತ್ತಿದ್ದ ಜಲಕನ್ಯೆಯರ (water-sprites and trolls) ಮತ್ತು ಪರ್ವತಗಳು ಸೆಳೆದ ಕನ್ಯೆಯರ (enchanted maidens lured into the mountain) ಕತೆಗಳನ್ನು ಮರೆಯುವುದು ಸಾಧ್ಯವೇ? ಬಂಡೆಗಳಲ್ಲಿ, ಕಗ್ಗಾಡುಗಳಲ್ಲಿ ಕಾವ್ಯವಿದೆ ಎಂದು ನನಗೆ ಮನನ ಮಾಡಿಕೊಟ್ಟವರು ಅವರೇ. ಇನ್ನು ಬಿಳುಚಿಗೊಂಡ ಮುಖದ, ಹಳ್ಳಬಿದ್ದ ಕೆನ್ನೆಯ, ಸನ್ಯಾಸಿ ಮತ್ತು ಸನ್ಯಾಸಿನಿಯರ ಬಗ್ಗೆ ಯೋಚಿಸಿ ನೋಡು. ಅವರು ಕಂಡ ದರ್ಶನ ಮತ್ತು ಕೇಳಿದ ಧ್ವನಿಗಳ ಬಗ್ಗೆ ಯೋಚಿಸು. ಅವರ ದಂತಕತೆಗಳ ಬೊಕ್ಕಸದಿಂದ ನಾನು ಸಾಕಷ್ಟು ಪಡೆದಿದ್ದೇನೆ. ಇನ್ನು ಜೆರೂಸಲೆಮ್ಮಿಗೆ ಹೋದ ನಮ್ಮ ರೈತರು ನನಗೆ ನೀಡಿರುವ ಅದ್ಭುತ ಘಟನೆಗಳಿಗಾಗಿ ನಾನು ಅವರಿಗೆ ಋಣಿಯಲ್ಲವೇ? ಕೇವಲ ಮನುಷ್ಯರಿಗೆ ಮಾತ್ರವಲ್ಲ, ನಾನು ಇಡೀ ಪ್ರಕೃತಿಗೆ ನಾನು ಚಿರ ಋಣಿ. ಭೂಮಿಯ ಮೇಲೆ ಚಲಿಸುವ ಪ್ರಾಣಿಗಳು, ಆಕಾಶದಲ್ಲಿ ಹಾರುವ ಹಕ್ಕಿಗಳು, ಮರಗಿಡಗಳು, ಹೂವುಗಳು ಇವೆಲ್ಲಾ ನನಗೆ ಅವುಗಳ ಮರ್ಮಗಳಲ್ಲಿ ಕೆಲವನ್ನು ತಿಳಿಸಿವೆ."

ಅಪ್ಪ ನಗುತ್ತಾನೆ, ತಲೆ ಅಲ್ಲಾಡಿಸುತ್ತಾನೆ, ಅವನಿಗೆ ಸ್ವಲ್ಪವೂ ಚಿಂತೆ ಇರುವಂತಿಲ್ಲ. “ಅರ್ಥವಾಗಲಿಲ್ಲವೇ ಅಪ್ಪಾ? ನನಗೆ ಮಹಾ ಸಾಲ ಇದೆ. “ ಎಂದು ಹೇಳಿದ ನಾನು ಮತ್ತೂ ಗಂಭೀರಳಾಗುತ್ತೇನೆ. “ಈ ಸಾಲವನ್ನು ಹೇಗೆ ತೀರಿಸಲಿ ಎಂಬುದು ಭೂಮಿಯ ಮೇಲಿರುವ ಯಾರಿಗೂ ತಿಳಿದಿಲ್ಲ. ಸ್ವರ್ಗದಲ್ಲಿರುವ ನಿನಗೆ ಇದು ತಿಳಿದಿರಬಹುದು ಎಂದು ಕೊಂಡಿದ್ದೆ”. “ನನಗೆ ಗೊತ್ತು” ಎಂದು ತಿಳಿಸಿ ಅಪ್ಪ ಎಂದೂ ಇದ್ದಂತೆ ಆರಾಮವಾಗಿ ಇದ್ದುಬಿಡುತ್ತಾನೆ. ಅವನು ಹೇಳುತ್ತಾನೆ , “ಹೆದರ ಬೇಡ, ಮಗು, ನಿನ್ನ ಸಮಸ್ಯೆಗೆ ಪರಿಹಾರ ಇದೆ.”

“ಇರಬಹುದು ಅಪ್ಪ, ಆದರೆ ನನಗೆ ಮತ್ತೊಂದು ಸಾಲ ಬೇರೆ ಇದೆ. ನಮ್ಮ ಭಾಷೆಯನ್ನು ಕಂಡುಕೊಂಡು ಅದನ್ನು ಮತ್ತೊಬ್ಬರೊಡನೆ ಸಂಪರ್ಕಿಸಲು ಒಂದು ಉಪಯುಕ್ತ ಯಂತ್ರವಾಗುವಂತೆ ಎರಕ ಹೊಯ್ದ ಮಂದಿಯ ಬಗ್ಗೆ ಮತ್ತು ಅದನ್ನು ನನಗೆ ಉಪಯೋಗಿಸಲು ಕಲಿಸಿದವರ ಬಗ್ಗೆ ಏನು ಹೇಳಲಿ? ನನಗಿಂತ ಮುಂಚೆ ಗದ್ಯ ಮತ್ತು ಪದ್ಯಗಳನ್ನು ಬರೆದು, ಬರಹವನ್ನು ಕಲೆಯಾಗಿ ಮಾರ್ಪಡಿಸಿದವರಿದ್ದಾರೆ, ದಾರಿದೀಪಗಳಿದ್ದಾರೆ, ಮಾರ್ಗದರ್ಶಕರಿದ್ದಾರೆ. ಇವರೆಲ್ಲರಿಗೂ ನಾನು ಋಣಿಯಲ್ಲವೇ?. ನಾನು ಇನ್ನೂ ಮಗುವಾಗಿರುವಾಗಲೇ ಕೃತಿಗಳನ್ನು ರಚಿಸಿದ್ದ ನಾರ್ವೆಯ ಮಹಾ ಬರಹಗಾರರಿಗೆ, ರಷ್ಯಾದ ಬರಹಗಾರರಿಗೆ ನಾನು ಸಹಸ್ರಪಟ್ಟು ಋಣಿಯಲ್ಲವೇ, ಅಪ್ಪಾ? ನಮ್ಮ ದೇಶದ ಸಾಹಿತ್ಯ ತನ್ನ ಅತ್ಯುನ್ನತಿಯನ್ನು ಕಂಡುಕೊಂಡಾಗ, ರೈಡ್ ಬರ್ಗಿನ (Rydberg) ಶ್ರೇಷ್ಠ ಚಕ್ರವರ್ತಿಗಳು, ಸ್ನೋಯಿಲ್ಸ್ಕಿಯ (Snoilsky) ಕಾವ್ಯ, ಸ್ಟ್ರಿಂಡ್ ಬರ್ಗನ (Strindberg) ಶಿಖರ, ಗೈಜರ್ ಸ್ಟಾಮನ (Geijerstam) ಜಾನಪದ ಕೃತಿಗಳು, ಆನ್ - ಚಾರ್ಲಾಟ್ ಎಡ್ ಗ್ರೆನ್ (Anne-Charlotte Edgren) ಮತ್ತು ಎರ್ನ್ಸ್ಟ್ ಅಲ್ಗ್ರೆನ್ (Ernst Ahlgren) ಇವರುಗಳ ಆಧುನಿಕ ಮನುಜರು ಮತ್ತು ಹೈಡೆನ್ ಸ್ಟಾಮನ (Heidenstam) ಪುರಾತನ ವ್ಯಕ್ತಿಗಳು ಇವೆಲ್ಲವನ್ನೂ ನನಗೆ ಕಾಣಲು ದೊರೆತವು ಅಲ್ಲವೇ? ಸೋಫಿ ಎಲ್ಕನ್ (Sophie Elkan) ಚರಿತ್ರೆಗೆ ಜೀವ ತಂದುಕೊಟ್ಟಳು, ಫ್ರೋಡಿಂಗ್ (Fröding) ಮತ್ತು ಅವನ ವಾರ್ಮ್ ಲ್ಯಾಂಡಿನ ಕತೆಗಳು, ಲೇವೆರ್ಟಿನ್ನನ (Levertin's) ದಂತಕತೆಗಳು, ಹಾಲ್ ಸ್ಟ್ರಾಮನ (Hallström) ಮೃತ್ಯುದೇವತೆ (thanatos), ಮತ್ತು ಕಾರ್ಲ್ ಫೀಲ್ಡ್ಟ್ ನ (Karlfeldt) ದಾಲೆಕಾರ್ಲಿಯನ್ (Dalekarlian) ಚಿತ್ರಗಳು, ಇವಲ್ಲದೇ ಇನ್ನೂ ಅನೇಕ ಬರಹಗಳು ಅಂದು ಇನ್ನೂ ಹೊಸದಾಗಿದ್ದವು. ಇವೆಲ್ಲಾ ನನ್ನ ಕಲ್ಪನೆಗಳಿಗೆ ಪುಷ್ಟಿ ನೀಡಿದವು, ನಾನು ಕೂಡ ಸ್ಪರ್ಧೆಗೆ ನಿಲ್ಲುವಂತೆ ಮಾಡಿದವು, ನನ್ನ ಕನಸುಗಳು ನನಸಾಗುವಂತೆ ಮಾಡಿದವು. ಅವುಗಳಿಗೆ ನಾನು ಋಣಿಯಲ್ಲವೇ?

ಅಪ್ಪ ಹೇಳುತ್ತಾನೆ, “ಹೌದು, ಹೌದು, ನಿನ್ನದು ದೊಡ್ಡ ಸಾಲ, ಅದನ್ನು ತೀರಿಸಲು ಏನಾದರೂ ದಾರಿ ನೋಡೋಣ, ಹೆದರ ಬೇಡ.”

ನಾನು ಹೇಳುತ್ತೇನೆ, “ಅಪ್ಪಾ, ಅದು ಎಷ್ಟು ಕಷ್ಟ ಎಂಬುದರ ಅರಿವು ನಿನಗೆ ಇದ್ದಂತಿಲ್ಲ. ನನ್ನ ಓದುಗರಿಗೂ ನಾನು ಎಷ್ಟು ಋಣಿ ಎಂಬುದು ನಿನಗೆ ಗೊತ್ತಿದೆಯೇ? ನನ್ನನ್ನು ದಕ್ಷಿಣದಲ್ಲಿ ಕಾರ್ಯನಿಮಿತ್ತ ತಿರುಗಾಡಲು ಪ್ರೋತ್ಸಾಹಿಸಿದ ವೃದ್ಧ ರಾಜನಿಗೆ ಮತ್ತು ಅವನು ಕಿರಿಯ ಮಗನಿಗೆ, ನಿಲ್ಸ್ ಹೋಲ್ಗೆರ್ಸನ್ನನಿಗೆ (Nils Holgersson) ಧನ್ಯವಾದಗಳನ್ನು ಸೂಚಿಸಿ ಪತ್ರ ಬರೆದ ಚಿಕ್ಕ ಶಾಲಾ ವಿದ್ಯಾರ್ಥಿಗಳಿಗೆ ಇವರೆಲ್ಲರಿಗೂ ನಾನು ತೀರಾ ಆಭಾರಿಯಾಗಿದ್ದೇನೆ.. ನನ್ನ ಪುಸ್ತಕಗಳನ್ನು ಯಾರೂ ಓದ ಬಯಸದೇ ಹೋಗಿದ್ದರೆ ನಾನೇನು ಮಾಡಬಹುದಿತ್ತು? ನನ್ನ ಬಗ್ಗೆ ಬರೆದವರನ್ನು ಮರೆಯ ಬೇಡ. ಡೆನ್ಮಾರ್ಕಿನ ಆ ವಿಮರ್ಶಕನನ್ನು ಸ್ಮರಿಸಿಕೋ. ಕೆಲವೇ ಪದಗಳಲ್ಲಿ ಅವನು ನನಗೆ ಡೆನ್ಮಾರ್ಕಿನಲ್ಲಿ ಅನೇಕ ಗೆಳೆಯರನ್ನು ತಂದುಕೊಟ್ಟ. ಅವನು ಗ್ಯಾಲ್ ಮತ್ತು ಅಂಬ್ರೋಸಿಯಾಗಳನ್ನು (gall and ambrosia) (ಎಂದರೆ ಕಹಿ ಮತ್ತು ಸಿಹಿಗಳನ್ನು) ಸ್ವೀಡನ್ನಿನಲ್ಲಿ ಹಿಂದೆ ಯಾರೂ ಮಾಡದ

ತನ್ನ ಪ್ರೌಢ ರೀತಿಯಲ್ಲಿ ಬರೆಸುತ್ತಿದ್ದ. ಈಗ ಅವನು ಬದುಕಿಲ್ಲ. ಹೊರದೇಶಗಳಲ್ಲಿ ನನಗಾಗಿ ಕಾರ್ಯನಿರ್ವಹಿಸಿದ ಎಲ್ಲರ ಬಗ್ಗೆ ಯೋಚಿಸು. ನಾನು ಅವರೆಲ್ಲರಿಗೂ ಋಣಿ- ಅವರ ಹೊಗಳಿಕೆ ಮತ್ತು ತೆಗಳಿಕೆ ಎರಡಕ್ಕೂ.

ಅಪ್ಪ "ಹೌದು, ಹೌದು" ಎನ್ನುತ್ತಾನೆ. ಆದರೆ ಈಗ ಅವನು ಮುಂಚಿನಷ್ಟು ಶಾಂತನಾಗಿಲ್ಲ. ನಿಜ, ನನಗೆ ಸಹಾಯ ಮಾಡುವುದು ಸುಲಭವಲ್ಲ ಎಂಬುದರ ಅರಿವು ಆವನಿಗಾಗುತ್ತಿದೆ.

"ನನಗೆ ನೆರವಿತ್ತವರನ್ನೆಲ್ಲಾ ಸ್ಮರಿಸಿಕೋ ಅಪ್ಪಾ, " ನಾನು ಹೇಳುತ್ತೇನೆ. "ನನ್ನ ನಂಬುಗೆಯಗೆಳತಿ ಎಸ್ಸೆಲ್ಡೆ (Esselde) ಯನ್ನು ಜ್ಞಾಪಿಸಿಕೋ. ಯಾರೂ ನನ್ನನ್ನು ನಂಬದೇ ಹೋದಾಗ ಅವಳು ನನಗಾಗಿ ಬಾಗಿಲನ್ನು ತೆರೆಯಲು ಯತ್ನಿಸಿದಳು.. ಇನ್ನು ನನ್ನ ಮೇಲೆ ಕಾಳಜಿ ವಹಿಸಿ ನನ್ನ ಕೃತಿಗಳನ್ನು ಕಾಪಾಡಿದವರನ್ನು ನೆನೆಸಿಕೋ. ನನ್ನ ಸ್ನೇಹಿತೆ ಮತ್ತು ಪ್ರಯಾಣಸಂಗಾತಿ ನನ್ನನ್ನು ದಕ್ಷಿಣಕ್ಕೆ ಕರೆದೊಯ್ದುದಲ್ಲದೇ ಅಲ್ಲಿಯ ಕಲಾ ವೈಭವಗಳನ್ನು ತೋರಿಸಿ ನನ್ನ ಜೀವನವನ್ನು ಸುಖಮಯ ಮತ್ತು ಹಗುರಾಗಿ ಮಾಡಿದಳು. ಇನ್ನು ನನ್ನತ್ತ ಜನ ತೋರಿಸಿರುವ ಪ್ರೀತಿ, ಗೌರವ, ಪ್ರಶಸ್ತಿಗಳೆಷ್ಟೋ! ಈಗ ಅರ್ಥವಾಯಿತೇ ನಿನಗೆ? ಈ ಮಹಾ ಋಣವನ್ನು ತೀರಿಸುವುದು ಹೇಗೆ ಎಂಬುದನ್ನು ಅರಿಯಲು ನಿನ್ನೆಡೆ ಬರಲೇಬೇಕಾಯಿತು ನಾನು.

ಅಪ್ಪ ತಲೆ ತಗ್ಗಿಸುತ್ತಾನೆ. ಅವನಿಗೆ ಈಗ ಹಿಂದಿದ್ದ ವಿಶ್ವಾಸ ಇರುವಂತೆ ಕಾಣಿಸುವುದಿಲ್ಲ.

"ಒಪ್ಪಿಕೊಳ್ಳುತ್ತೇನೆ, ಮಗಳೇ. ನಿನಗೆ ಸಹಾಯ ಮಾಡುವುದು ಸುಲಭವೇನಲ್ಲ. ಆದರೆ ಮತ್ತಾರಿಂದಲೂ ನೀನು ಸಾಲ ಪಡೆದಿಲ್ಲವೇ?"

"ಹೌದು ಅಪ್ಪ, ಹಿಂದಿನ ಸಾಲಗಳನ್ನು ತೀರಿಸುವುದೇ ಬಹಳ ಕಷ್ಟ, ಮತ್ತೊಂದು ಮಹಾ ಸಾಲ ಇನ್ನೂ ಬರಲಿದೆ. ಅದಕ್ಕೇ ನಿನ್ನ ಬುದ್ಧಿವಾದ ಕೇಳಲು ಬಂದಿದ್ದೇನೆ." "ಇನ್ನೂ ಸಾಲ ಇದೆ ಅಂದರೆ ನನಗೆ ಅರ್ಥವಾಗುತ್ತಿಲ್ಲ. " ಅಪ್ಪ ಹೇಳುತ್ತಾನೆ. ಆಗ ನಾನು ಅವನಿಗೆ (ಈ ಪ್ರಶಸ್ತಿಯ ಬಗ್ಗೆ) ಎಲ್ಲವನ್ನೂ ಹೇಳಿಬಿಡುತ್ತೇನೆ.

"ಈ ಅಕ್ಯಾಡೆಮಿಯ ಬಗ್ಗೆ ನಾನು ನಂಬಲಾರೆ.... " ಎಂದು ಹೇಳಿದ ಅಪ್ಪ ನನ್ನತ್ತ ದೃಷ್ಟಿ ಹರಿಸಿ, ನನ್ನ ಮುಖ ನೋಡಿ ಎಲ್ಲವೂ ನಿಜ ಎಂಬುದನ್ನು ಗ್ರಹಿಸುತ್ತಾನೆ. ಅವನ ಮುಖದ ಪ್ರತಿಯೊಂದು ಸುಕ್ಕೂ ಕಂಪಿಸಿ, ಕಣ್ಣೀರು ಹರಿಯುತ್ತದೆ.

"ನನ್ನ ಹೆಸರನ್ನು ಸೂಚಿಸಿದವರ ಬಗ್ಗೆ, ನನ್ನನ್ನು ಬಹುಮಾನಕ್ಕೆ ಅರಿಸಿದವರ ಬಗ್ಗೆ ನಾನು ಏನು ಹೇಳಲಿ? ಅಪ್ಪಾ, ಅವರು ನನ್ನ ಮೇಲೆ ಪ್ರಶಸ್ತಿ ಮತ್ತು ಹಣವನ್ನು ಮಾತ್ರ ದಯಪಾಲಿಸುತ್ತಿಲ್ಲ. ಅವರು ನನ್ನಲ್ಲಿ ನಂಬಿಕೆ ಇಟ್ಟು ಪ್ರಪಂಚದ ಮುಂದೆ ನನ್ನನ್ನು ಮೆರೆಸಿದ್ದಾರೆ. ಈ ಋಣವನ್ನು ನಾನು ಹೇಗೆ ತೀರಿಸಲಿ?"

ಅಪ್ಪ ಕೂರುತ್ತಾನೆ. ಯೋಚಿಸುತ್ತಿರುವ ಅವನಿಗೆ ಯಾವ ಮಾತೂ ಹೊರಬಾರದು. ಅವನ ಆನಂದ ಬಾಷ್ಪಗಳನ್ನು ಒರೆಸಿಕೊಂಡು, ತನ್ನ ಹಸ್ತವನ್ನು ಕುರ್ಚಿಯ ತೋಳಿಗೆ ಹೊಡೆದು ಹೇಳುತ್ತಾನೆ "ಭೂಮಿ ಅಥವಾ ಆಕಾಶದಲ್ಲಿರುವವರು ಪರಿಹರಿಸಲಾಗದ ಸಮಸ್ಯೆಯ ಬಗ್ಗೆ ನಾನು ತಲೆ ಕೆಡೆಸಿಕೊಳ್ಳುವುದಿಲ್ಲ. ನಿನಗೆ ನೊಬೆಲ್ ಬಹುಮಾನ ಬಂದಿದೆ ಎಂಬ ಆನಂದ ಸಾಕು; ಮತ್ತಾವ ಚಿಂತೆಯೂ ನನಗೆ ಬೇಡ."

ರಾಜರುಗಳೇ, ರಾಜ ವಂಶಸ್ತರೇ, ಮಹಿಳೆಯರೇ, ಮಹನೀಯರೇ, ನನ್ನ ಪ್ರಶ್ನೆಗಳಿಗೆ ಇದಕ್ಕಿಂತ ಉತ್ತಮ ಉತ್ತರ ದೊರೆತಿಲ್ಲ. ಹೀಗಾಗಿ ಸ್ವೀಡಿಷ್ ಅಕ್ಯಾಡೆಮಿಗೆ ಶುಭ ಹಾರೈಕೆ ಕೋರುವುದು ನನ್ನ ಭಾಗ್ಯವಾಗಿದೆ. ನೀವೂ ನನ್ನೊಡನೆ ಸೇರಿ ಎಂದು ಕೇಳಿಕೋಳ್ಳುತ್ತೇನೆ.



ಲ್ಯಾಗರ್ಲಾಫ್ ಸ್ವಿಡನ್ನಿನ ರಾಜ ಗುಸ್ತಾಫ್ ೫ ಅವನಿಂದ ನೊಬೆಲ್ ಬಹುಮಾನ ಪಡೆಯುತ್ತಿರುವ ಚಿತ್ರ.